# ವಿಶ್ವ ದಾಖಲೆಯ ನಿಶಾ



**ನಿಶಾ ಶಶಿಧರ್ ಉದಯದ 'ಕಾವೇರಿ'ಯ ಕಾವೇರಿ**

◆ **ನಿಮ್ಮ ಪರಿಚಯ ಮಾಡಿಕೊಡಿ?**

ನಮ್ಮ ಊರು ಚಿಕ್ಕಮಗಳೂರು, ತಂದೆಯ ವರ್ಗಾವಣೆಯಿಂದಾಗಿ ಮೈಸೂರಿನಲ್ಲಿ ಬಂದು ನೆಲೆಸಿದ್ದೇವೆ. ಅಮ್ಮ ಕಾವ್ಯಾ, ಪ್ಲೇಹೋಂ ನಡೆಸುತ್ತಿದ್ದಾರೆ. ಅಪ್ಪ ಶಶಿಧರ ಮೈಸೂರು ಆರ್ಗ್ಯಾನಿಕ್ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ನಾನು ನೃತ್ಯ ಕಲಿಯುತ್ತಿದ್ದೆ. ಮೂರನೇ ತರಗತಿಯಲ್ಲಿ ಓದುತ್ತಿದ್ದಾಗ 'ತನನಂ ತನನಂ' ಸಿನಿಮಾದಲ್ಲಿ ನಾಯಕ ನಟಿ ರಮ್ಯಾ ಜೊತೆ ಡ್ಯಾನ್ಸ್ ಮಾಡುವ ಅವಕಾಶ ಸಿಕ್ಕಿತು. ಚಿತ್ರೀಕರಣದಲ್ಲಿನ ವಾತಾವರಣ ಕಂಡು ನಟಿ ಆಗಬೇಕು ಎನ್ನುವ ಆಶೆ ನನ್ನಲ್ಲಿ ಮೂಡಿತು. ನಂತರ ನನ್ನ ಕನಸು ಸಿನಿಮಾ ನಾಯಕಿ ಆಗಬೇಕು ಎನ್ನುವುದಷ್ಟೇ ಆಗಿತ್ತು. ಶಾಲೆಯಲ್ಲಿ ಏನಾಗುತ್ತೀಯಾ ಎಂದು ಕೇಳಿದರೆ ಎಂದೂ ಡಾಕ್ಟರ್– ಎಂಜಿನಿಯರ್ ಎನ್ನಲಿಲ್ಲ. ಯಾರೇ ಕೇಳಿದರೂ 'ಸಿನಿಮಾ ಹೀರೊಯಿನ್ ಆಗುತ್ತೇನೆ' ಎನ್ನುತ್ತಿದ್ದೆ. ನಟನೆಗೆ ಹೋಗುತ್ತೇನೆ ಎಂದ ತಕ್ಷಣ ಅಮ್ಮ ಬೆಂಬಲಕ್ಕೆ ನಿಂತರು. ಅಪ್ಪ ಮಾತ್ರ ನಟನೆ ಗೊತ್ತಿಲ್ಲ ಹೇಗೆ ಮಾಡ್ತೀಯಾ? ಮೊದಲು ವಿದ್ಯಾಭ್ಯಾಸ ಮುಗಿಸು ಮುಂದೆ ಏನಾದರೂ ಮಾಡಬಹುದು ಎಂಬ ಸಲಹೆಯನ್ನು ನೀಡಿದರು. ನನಗಿರುವ ಹಟಕ್ಕೆ ಮನಸೋತ ಅಮ್ಮ ಅಪ್ಪನ ಮನವೊಲಿಸಿದ್ದರಿಂದ ನಟಿಯಾಗಿದ್ದೇನೆ.

◆ **ನಿಮ್ಮ ಕನಸು ನನಸಾಗಿದ್ದು ಹೇಗೆ?**

ಓದಿನ ಜೊತೆ ಮಾಡೆಲಿಂಗ್ ಶುರುಮಾಡಿದೆ. ಸಿನಿಮಾ– ಧಾರಾವಾಹಿಗಳಿಗೆ ಆಡಿಷನ್ ನೀಡಲು ಆರಂಭಿಸಿದೆ. ಹೀಗೆ ಹೋಗುತ್ತಾ ಸಂಪರ್ಕಗಳು ಬೆಳೆಯತೊಡಗಿದವು. ಸಾಮಾಜಿಕ ಜಾಲತಾಣಗಳಲ್ಲಿ ಆಡಿಷನ್ ಮಾಹಿತಿ ತಿಳಿದು ಆಡಿಷನ್ ನೀಡುತ್ತಿದ್ದೆ. ಸುಮಾರು ಒಂದೂವರೆ ವರ್ಷ ಅದನ್ನೇ ಮಾಡಿದ್ದೇನೆ. ಎಷ್ಟೇ ಪ್ರಯತ್ನ ಮಾಡಿದರೂ ಅವಕಾಶ ಸಿಗುತ್ತಿರಲಿಲ್ಲ ಹಾಗಾಗಿ ಸುಮ್ಮನಾಗಿ ಬಿಟ್ಟಿದ್ದೆ. ಒಲ್ಲದ ಮನಸ್ಸಿನಿಂದ 'ಕಾವೇರಿ'ಗೆ ಆಡಿಷನ್ ನೀಡಿದೆ. ಇದರಲ್ಲಿ ಪ್ರಧಾನ ಪಾತ್ರ ಸಿಕ್ಕಿದೆ. ಇದೇ ಮೊದಲ ಧಾರಾವಾಹಿ. ನನಗೆ ಇದ್ದ ಗುರಿ ಸಿನಿಮಾ ಇಲ್ಲಿ ಕೆಲಸ ಚೆನ್ನಾಗಿ ಕಲಿತು ಮುಂದೆ ಮಾಡುತ್ತೇನೆ. ಇನ್ನೂ ಡಿಗ್ರಿಯಲ್ಲಿ ಓದುತ್ತಿದ್ದೇನೆ. ಸಮಯದ ಹೊಂದಾಣಿಕೆ ಮಾಡಿಕೊಂಡು ನಟಿಸುತ್ತಿದ್ದೇನೆ.

◆ **ಬಣ್ಣ ಹಚ್ಚಿದಾಗ ಎದುರಾದ ಸವಾಲುಗಳು?**

ನನ್ನ ಕನ್ನಡ ಭಿನ್ನವಾಗಿತ್ತು. 'ಅ'ಕಾರ 'ಹ'ಕಾರದ ಉಚ್ಚಾರಣೆಯಲ್ಲಿಯೇ ವ್ಯತ್ಯಾಸ ಗೊತ್ತಾಗುತ್ತಿರಲಿಲ್ಲ. ಅಭಿನಯ ತರಬೇತಿಯನ್ನೂ ಪಡೆದಿರಲಿಲ್ಲ. ಆಡಿಷನ್ನಿಗೆ ಹೋದಾಗ ಒಬ್ಬರು ಕನ್ನಡಿಯ ಮುಂದೆ ನಿಂತು ಅಭ್ಯಾಸ ಮಾಡಲು ಹೇಳಿದರು. ಒಂದೂವರೆ ವರ್ಷ ಅದನ್ನೇ ಮಾಡಿದೆ. ಕಾವೇರಿಗೆ ಆಡಿಷನ್ ನೀಡಲು ಬಂದಾಗ ಕೂಡ ಅನುಮಾನದಿಂದಲೇ ಬಂದಿದ್ದೆ. ಅವಕಾಶ ಸಿಕ್ಕಿತು. ಚಿತ್ರೀಕರಣದ ಮೊದಲ ದಿನವೇ ಎಲ್ಲ ಕಲಾವಿದರ ಜೊತೆ ನನ್ನ ಸೀನ್. ದೊಡ್ಡ ಡೈಲಾಗ್ ಬೇರೆ ಕೈಯಲ್ಲಿ ಕೊಟ್ಟಿದ್ದಾರೆ. ನಾನು ಹೆದರಿ ಬಿಟ್ಟಿದ್ದೆ. ಎಲ್ಲ ಕಲಾವಿದರು ಮತ್ತು ನಿರ್ದೇಶಕರ ಪ್ರೋತ್ಸಾಹದಿಂದ ಹೇಗೋ ನಟಿಸಿದೆ. ಆರಂಭದ ಕೆಲವೊಂದು ಕಂತುಗಳು ಸರಿಯಾಗಿ ಬರಲಿಲ್ಲ. ಮಾನಿಟರ್ ಮುಂದೆ ಕುಳಿತು ಬೇರೆ ನಟರು ಹೇಗೆ ಅಭಿನಯಿಸುತ್ತಿದ್ದಾರೆ ಎನ್ನುವುದನ್ನು ನೋಡುತ್ತಿದ್ದೆ. ಅವರ ಅಭಿನಯವನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದ ನಾನು ನಂತರ ಅವರ ನಟನೆ ಬಗ್ಗೆ ಚರ್ಚಿಸುತ್ತಿದ್ದೆ. ಚಿಕ್ಕವರಿರಲಿ ದೊಡ್ಡವರೇ ಇರಲಿ ಅವರ ಜೊತೆ ಮಾತನಾಡುತ್ತಿದ್ದೆ. ಮೊದಲೆಲ್ಲಾ ನಿತ್ಯವೂ ಒಂದಿಲ್ಲೊಂದು ಸವಾಲು ನನಗೆ ಎದುರಾಗುತ್ತಿದ್ದವು. ನಾನು ಮೂರ್ನಾಲ್ಕು ಟೇಕ್ ತೆಗೆದುಕೊಳ್ಳುತ್ತಿದ್ದೆ. ನನ್ನಿಂದ ಎಲ್ಲರಿಗೂ ತೊಂದರೆಯಾಗುತ್ತಿದೆ ಎಂದು ಮತ್ತಷ್ಟು ಭೀತಿಗೆ ಒಳಗಾಗುತ್ತಿದ್ದೆ. ನನಗೆ ಅಭಿನಯ ಕಲಿಯಲು ಕೆಲವು ಹಳೆ ಧಾರಾವಾಹಿ ಮತ್ತು ಸಿನಿಮಾಗಳ ಪಟ್ಟಿಯನ್ನು ನೀಡಿದರು. ಅದನ್ನು ನೋಡುತ್ತಾ ಅಭ್ಯಾಸವನ್ನು ಮಾಡುತ್ತಿದ್ದೆ. ಕಾಲಕ್ರಮೇಣ ಡೈಲಾಗ್ ಸರಿಯಾಗಿ ಹೇಳುವುದನ್ನು ರೂಢಿಸಿಕೊಂಡೆ. ಜೊತೆ ಅಭಿನಯವನ್ನೂ ಕಲಿತೆ.

◆ **ಮಾಡೆಲಿಂಗ್ ವಿಶ್ವ ದಾಖಲೆ ಬಗ್ಗೆ ಹೇಳಿ?**

ಮಾಡೆಲಿಂಗ್ ಮಾಡುವಾಗ ಒಂದು ಸ್ಪರ್ಧೆ ಎದುರಾಯಿತು. ಅದಕ್ಕಾಗಿ ಮೈಸೂರಿನಲ್ಲಿ ಆಡಿಷನ್ ನೀಡಿದೆ. ಅಲ್ಲಿ ನನ್ನನ್ನು ಆಯ್ಕೆ ಮಾಡಿದರು. ಬೆಂಗಳೂರಿನಿಂದ 104 ಮಂದಿ ಆಯ್ಕೆಯಾದೆವು. 2018ರಲ್ಲಿ ಚೆನ್ನೈಯಲ್ಲಿ ಮಾಡೆಲಿಂಗ್ ಸ್ಪರ್ಧೆ ಇತ್ತು. 2014ರಲ್ಲಿ ಮೆಕ್ಸಿಕೊದಲ್ಲಿ 24 ಗಂಟೆ ನಿರಂತರ ನಡಿಗೆ ರೆಕಾರ್ಡ್ ಮಾಡಿದ್ದರು. 2018ರಲ್ಲಿ ಅದನ್ನು ಮುರಿಯುವ ಸವಾಲು ಇತ್ತು. ನಾನು 25 ಗಂಟೆ ನಡೆದು ದಾಖಲೆಯನ್ನು ನಿರ್ಮಿಸಿದೆ.

◆ **ನಿಮ್ಮ ಹವ್ಯಾಸವೇನು?**

ಸ್ಕೆಚ್ ಮಾಡುತ್ತೇನೆ. ಯಾವುದೇ ರೀತಿಯ ಚಿತ್ರ ಇದ್ದರೂ ಬರೆಯುತ್ತೇನೆ. ಡ್ರಾಯಿಂಗ್ ಮಾಡುತ್ತೇನೆ. ಡ್ಯಾನ್ಸ್ ಮಾಡುತ್ತೇನೆ. ಸೀರಿಯಲ್ ನನ್ನ ಮೊದಲ ಆಯ್ಕೆಯಲ್ಲ; ಸಿನಿಮಾಕ್ಕೆ ಪ್ರಾಶಸ್ತ್ಯ ನೀಡುತ್ತೇನೆ. ಒಳ್ಳೆಯ ಬ್ಯಾನರ್ ಸಿನಿಮಾ ಮಾಡಬೇಕು. ಕಲಿಯುವುದು ತುಂಬ ಇದೆ. ಸ್ಟಾರ್ ಆಗಬೇಕು ಎನ್ನುವ ಕನಸು ಇದೆ. ಕನ್ನಡದ ಜನಪ್ರಿಯ ನಾಯಕ ನಟರ ಜೊತೆ ನಟಿಸಬೇಕು. ಸುದೀಪ್ ಅವರ ಜೊತೆ ನಟಿಸಬೇಕು. ಸಮಾಜಮುಖಿಯಾಗಿ ಕೆಲಸ ಮಾಡಬೇಕು ಎನ್ನುವ ಬಯಕೆ ಇದೆ.

■ **ರಾಘವೇಂದ್ರ ಕೆ.**